**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1040/2022**

ಪಿ.ಡಬ್ಲ್ಯೂಃ2

ಸಿ.ಡಬ್ಲ್ಯೂಃ 2

| | | |
|---|---|---|
| ಹೆಸರು | ಃ | ಕೃಷ್ಣಮೂರ್ತಿ |
| ತಂದೆ ಹೆಸರು | ಃ | ಅಚ್ಯುತಭಟ್ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ಅಕೌಂಟೆಟ್, ಗ್ರಾಮ ಪಂಚಾಯಿತಿ |
| ವಾಸಸ್ಥಳ | ಃ | ಗೋಪಾಲ ಕಾಲೋನಿ |

**ದಿನಾಂಕಃ 21-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ದಿನಾಂಕಃ 04-06-2021 ರಂದು ಗೋಪಾಲ ಗ್ರಾಮದ ಶಿವನ ದೇವಸ್ಥಾನದಲ್ಲಿ ಬಾಲ್ಯ ವಿವಾಹದ ವಿಚಾರವಾಗಿ ಪೊಲೀಸರು ಮಹಜರ್ ಕ್ರಮ ಜರುಗಿಸಿದ್ದು, ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ ಆರ್ ಕೆ ವಕೀಲರಿಂದ

ನಾನು ಪಂಚಾಯಿತಿ ಆಫೀಸಿನಲ್ಲಿ ಅಕೌಂಟೆಟ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ನಮ್ಮ ಕಛೇರಿ ಗೋಪಾಲ ಗ್ರಾಮದಲ್ಲಿ ಇರುತ್ತದೆ. ನೀವು ಸದರಿ ಮಹಜರ್ ಮಾಡಿದ ದಿನಾಂಕದಂದು ಕರ್ತವ್ಯದಲ್ಲಿ ಇದ್ದೀರಿ ಎಂಬುದಕ್ಕೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಆಗಲೀ, ಅಥವಾ ಪೊಲೀಸರಿಗೆ ಆಗಲೀ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಮಹಜರ್ ಗೆ ಬರಬೇಕೆಂದು ಲಿಖಿತ ನೋಟೀಸ್ ನೀಡಿದ್ದರಾ ಎಂದರೆ

ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಮಹಜರನ್ನು ಸ್ಥಳದಲ್ಲಿ ಬರೆದಿರುತ್ತಾರೆ ಅದನ್ನು ನಾನು ಓದಿರುವುದಿಲ್ಲ, ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಮಹಜರ್ ನ್ನು ನನ್ನ ಸಮಕ್ಷಮ ಬರೆದಿರುತ್ತಾರೆ. ಸದರಿ ಮಹಜರ್ ನ್ನು ನಿಮ್ಮ ಸಮಕ್ಷಮ ಬರೆದಿರುವುದಿಲ್ಲ, ನೀವು ಸದರಿ ದಾಖಲಾತಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-2 ನ್ನು ಬಾಲ್ಯ ವಿವಾಹದ ವಿಚಾರವಾಗಿ ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ತೆಗೆದ ಛಾಯಚಿತ್ರವಾಗಿರುತ್ತದೆ. ಸದರಿ ಗೋಪಾಲ ಗ್ರಾಮದಲ್ಲಿ ನಾನು ಕೆಲಸ ಮಾಡುತ್ತಿರುವುದರಿಂದ ಅಲ್ಲಿ ಏನೇ ನಡೆದರೂ ನನಗೆ ತಿಳಿಯುತ್ತದೆ ಎಂದರೆ ಸರಿ. ನಾವು ಮಹಜರ್ ಗೆ ಸಹಿ ಮಾಡಲು ಹೋದಾಗ ದೇವಸ್ಥಾನದ ಮುಂದೆ ಚಪ್ಪರ ಇದ್ದು, ಅದು 4-5 ದಿನಗಳ ಹಿಂದೆ ಹಾಕಿರುವ ಚಪ್ಪರ ಆಗಿರುತ್ತದೆ. ನಿಪಿ-2 ರಲ್ಲಿ ಯಾವುದೇ ಚಪ್ಪರ ಇಲ್ಲ ಎಂದರೆ ಸರಿ. ನಿಮ್ಮ ಸಮಕ್ಷಮ ಪೊಲೀಸರು ದೇವಸ್ಥಾನದ ಪೂಜಾರಿಯನ್ನು ಮಾತನಾಡಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇರದಿದ್ದರೂ ಆರೋಪಿತರ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**